ಶ್ರೀ ಶ್ರೀರಂಗದೇವರಾಯಲು: ಮಾನ್ಯ ಅಧ್ಯಕ್ಷರೆ, ಬೇವಿನ ಹಳ್ಳಿಯ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದರು, ಅವರ ಬಗ್ಗೆ ವಿಚಾರ ಮಾಡಲು ಒಂದು ಸಮಿತಿ ಮಾಡಿದ್ದು, ಅದರಲ್ಲಿ ಚೀಫ್ ಸೆಕ್ರೆಟರಿ, ಜಿಲ್ಲಾಧಿಕಾರಿಗಳು ಹಾಗೂ ಊರಿನ ಕೆಲವು ರೈತರು ಇದ್ದರು. ಆ ಸಮಿತಿ ಮೀಟಿಂಗ್ ಸೇರುತ್ತಿದ್ದು, ಇತ್ತೀಚೆಗೆ ಏಕೋ ಸೇರಿಲ್ಲ. ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಹಾಗೂ ಅಲ್ಲಿ ಜಿಲ್ಲಾಧಿಕಾರಿಗಳು ಚೇಂಜ್ ಆದಮೇಲೆ ಇವರ ಬಗ್ಗೆ ಏನು ಮಾಹಿತಿ ಬಂದಿಲ್ಲ. ಆ ಊರಿನಲ್ಲಿ ಒಂದು ಆಸ್ಪತ್ರೆ ಹಾಗೂ ಸ್ಕೂಲ್ ಕಟ್ಟಿಸಿಕೊಡಿ ಎಂದು ಕೇಳಿದ್ದೇವೆ. ಆದರೆ ಈಗ ಅಲ್ಲಿ ಮಾಡಿದರೆ ತೊಂದರೆಯಾಗುತ್ತದೆ. ಆದುದರಿಂದ ಊರನ್ನು ಬೇರೆ ಕಡೆ ಹೋಗುವುದಕ್ಕೆ ಅವಕಾಶ ಮಾಡಿದರೆ ಒಳ್ಳೆಯದು.

ಶ್ರೀ ಕೆ.ಜೆ.ಜಿ. ರಂಗನಾಥ್: ಮಾನ್ಯ ಅಧ್ಯಕ್ಷರೆ, 1994ರಲ್ಲಿ ಸ್ಥಾಪನೆಯಾಗಿರತಕ್ಕಂಥ ಕಾರ್ಖಾನೆ ಇದು. ನನಗೆ ಬಂದ ವರದಿ ಪ್ರಕಾರ ಆ ಕಾರ್ಖಾನೆ ಆ ಹಳ್ಳಿಯ ಹತ್ತಿರದಲ್ಲಿ ಇದೆ ಎಂದು ಗೊತ್ತಾಗಿದೆ. ಧಾರವಾಡ ಕೃಷಿ ವಿಶ್ವವಿದ್ಯಾನಿಲಯದವರು ಏನು ವರದಿ ಕೊಡುತ್ತಾರೆ ಎನ್ನುವುದನ್ನು ನೋಡಿ ಅದರ ಮೇಲೆ ವಿಚಾರ ಮಾಡಬೇಕು. ಆದರೆ ಅವರು ಊರು ಬೇರೆ ಕಡೆಗೆ ಹೋಗಬೇಕೆಂದು ಏನು ಹೇಳುತ್ತಿದ್ದಾರೆ ಅದು ನನ್ನ ಗಮನಕ್ಕೆ ಬರುವುದಿಲ್ಲ.

10. ಪ್ರಕಟಣೆ

ಅಧ್ಯಕ್ಷರು: ಈಗ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

1. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ನಿಯಮ 118ರ ಮೇರೆಗೆ ದಿನಾಂಕ 31.3.2001ರಂದು, ಕರ್ನಾಟಕ ಆಂಗಡಿಗಳು ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2001 ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಲಾಗಿದೆ.

2. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ನಿಯಮ 118ರ ಮೇರೆಗೆ ದಿನಾಂಕ 31.3.2001ರಂದು, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2001 ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಓಪೆಕ್ ಆಸ್ಪತ್ರೆ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಮಾನ್ಯ ಚನ್ನಮೇಗೌಡರು, ನಾನು ಮತ್ತು ಮಾನ್ಯ ಭೈರೇಗೌಡರು ಹಾಗೂ ಮಾನ್ಯ ಸೋಮಶೇಖರ್‌ರವರು ಒಂದು ನಿಲುವಳಿ ಸೂಚನೆ ಕಳುಹಿಸಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಬೇಗ ಊರಿಗೆ ಹೋಗಬೇಕು ಆದ್ದರಿಂದ ಈ ಸದನವನ್ನು ತಾವು ಬೇಗ ಮುಗಿಸಿ. ನಾವು ಎಂಟು ಗಂಟೆಗೆ ಇಲ್ಲಿಂದ ಬಿಡಬೇಕು.